44ನೇ ವರ್ಷದ ಪ್ರಕಾಶನದಲ್ಲಿ

# ಗೊಮ್ಮಟವಾಣಿ



ಸ್ಥಾಪನೆ : 01.01.1980 ಧಾರ್ಮಿಕ ಪಾಕ್ಷಿಕ ಪತ್ರಿಕೆ

ದಿನಾಂಕ : 01.09.2023 : ಶ್ರವಣಬೆಳಗೊಳ ಪ್ರಧಾನ ಸಂಪಾದಕರು : ಪರಮಪೂಜ್ಯ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ವೀರಸಂವತ್ : 2549 ಪುಟಗಳು : 4

ಸಂಪುಟ : 17 ಸಂಚಿಕೆ : 17 ಸೋಪಾನ : 1044 RNI No. KARKAN/2008/28274 Postal Regn. No. HSN/765/2021-23 WPP : No. SK/wpp/HSN-109/2021-23


## ಶ್ರೀಕ್ಷೇತ್ರ ಶ್ರವಣಬೆಳಗೊಳ

: ವಿಂಧ್ಯಗಿರಿ ಮತ್ತು ಚಂದ್ರಗಿರಿ :

ದರ್ಶನದ ಸಮಯ
ಬೆಳಗ್ಗೆ 6-30 ರಿಂದ ಸಂಜೆ 6-00ರವರೆಗೆ

ಪೂಜಾ ಸಮಯ
ಬೆಳಗ್ಗೆ 8-00 ರಿಂದ ಬೆಳಗ್ಗೆ 10-00ರವರೆಗೆ

ದೂರವಾಣಿ : 9008954636

: ಶ್ರೀಮಠ :

ದರ್ಶನ ಸಮಯ
ಬೆಳಗ್ಗೆ 6-30 ರಿಂದ ರಾತ್ರಿ 8-00ರವರೆಗೆ

ಪೂಜಾ ಸಮಯ
ಬೆಳಗ್ಗೆ 7-00 ರಿಂದ ಬೆಳಗ್ಗೆ 9-00ರವರೆಗೆ

ದೂರವಾಣಿ : 9844143722

: ಸ್ವಾಮೀಜಿಯವರ ಕಛೇರಿ :
ದೂರವಾಣಿ : 9380771024

: ಶ್ರೀಮಠದ ಕಛೇರಿ :
ದೂರವಾಣಿ : 8431560480


: ವಸತಿ ವಿಭಾಗ ಕಛೇರಿ:
ದೂರವಾಣಿ : 9353667645

## ಸ್ವಾತಂತ್ರ್ಯ ದಿನಾಚರಣೆ ಮೆರವಣಿಗೆಗೆ ಸ್ವಸ್ತಿಶ್ರೀ ಅಭಿನವ ಚಾರುಶ್ರೀಗಳವರಿಂದ ಚಾಲನೆ



ಶ್ರವಣಬೆಳಗೊಳ ಆ. 15 : ಶ್ರೀಜೈನಮಠದ ಎಸ್.ಡಿ.ಜೆ.ಎಂ.ಐ.ಎಂ.ಸಿ ಟ್ರಸ್ಟ್ (ರಿ), ವಿದ್ಯಾಸಂಸ್ಥೆಗಳು, ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆ, ಬಾಹುಬಲಿ ಆಸ್ಪತ್ರೆಗಳಲ್ಲಿ ಸ್ವಾತಂತ್ರ ದಿನಾಚರಣೆ ಆಚರಿಸಲಾಯಿತು. ಶ್ರೀ ಮಠದ ಮುಂಭಾಗದಲ್ಲಿ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ಸ್ವಾತಂತ್ರ್ಯತ್ಸವ ಮೆರವಣಿಗೆಗೆ ಚಾಲನೆ ನೀಡಿ ವಿದ್ಯಾರ್ಥಿಗಳಿಗೆ ಶುಭಾಷಯ ತಿಳಿಸಿದರು. ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಚಾರುಶ್ರೀ ನುಡಿ



ಅಹಿಂಸೆಯೇ ಪರಮಧರ್ಮ ಎಂಬುದು ಶ್ರೇಷ್ಠ ಧರ್ಮವಷ್ಟೇ ಅಲ್ಲ. ಜೈನರ ಮೂಲ ಜೀವದ್ರವ್ಯವಾಗಿದೆ. ಅಹಿಂಸೆಯು ಜನನ ಮರಣಗಳಿಂದ ಮುಕ್ತರಾಗಿ ಮೋಕ್ಷಗಾಮಿಯಾಗಲು ರಾಜಮಾರ್ಗವಾಗಿದೆ.

– ಸ್ವಸ್ತಿಶ್ರೀ ಕರ್ಮಯೋಗಿ
ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ

## ಅಭಿನವ ಚಾರುಶ್ರೀ ನುಡಿ



ಧರ್ಮ ಎಂಬುದು ಸಂಕೀರ್ಣವಾದ ವಿಷಯ. ಅದನ್ನು ಅರ್ಥೈಸಿಕೊಳ್ಳುವುದೇ ಒಂದು ಸಾಗರವನ್ನು ದಾಟಿದ ಅನುಭವ. ಒಬ್ಬ ಮನುಷ್ಯನನ್ನು ದೈವತ್ವದ ಕಡೆಗೆ ಸಾಗಿಸುವ ಸಾಧನವೇ ಧರ್ಮ. ವ್ಯಕ್ತಿಯೊಬ್ಬನ ವ್ಯಕ್ತಿತ್ವವನ್ನು ನಿರ್ಧರಿಸುವ ಶಕ್ತಿ ಧರ್ಮಕ್ಕಿದೆ.

– ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ

## ಮುಕುಟ ಸಪ್ತಮಿ ವಿಶೇಷ ಪೂಜೆ



ಶ್ರವಣಬೆಳಗೊಳ : ಮುಕುಟ ಸಪ್ತಮಿಯ ಪ್ರಯುಕ್ತ 23ನೇ ತೀರ್ಥಂಕರರಾದ ಭ. ಪಾರ್ಶ್ವನಾಥ ಸ್ವಾಮಿಯ ಮೋಕ್ಷ ಕಲ್ಯಾಣದ ನಿಮಿತ್ತ ಚಂದ್ರಗಿರಿಯ ಚಿಕ್ಕಬೆಟ್ಟದ ಅಂತರಾಳ ಪಾರ್ಶ್ವನಾಥ ಸ್ವಾಮಿಗೆ ಸಮಸ್ತ ಸಾಧುವೃಂದ ಹಾಗೂ ಕ್ಷೇತ್ರದ ಪೀಠಾಧಿಪತಿಗಳಾದ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ವಿಶೇಷ ಪೂಜೆ ನೆರವೇರಿಸಲಾಯಿತು. ಚಂದ್ರಗಿರಿಯ ಚಿಕ್ಕಬೆಟ್ಟದ ಅಂತರಾಳ ಪಾರ್ಶ್ವನಾಥ ಸ್ವಾಮಿಯ ಸನ್ನಿಧಿಯಲ್ಲಿ 9 ಕಲಶಗಳಿಂದ ಜಲಾಭಿಷೇಕ ನೆರವೇರಿಸಿದ ನಂತರ ಎಳನೀರು, ಕಬ್ಬಿನಹಾಲು, ಕ್ಷೀರ, ಶ್ವೇತ ಕಲ್ಕಚೂರ್ಣ, ಅರಿಶಿಣ, ಶ್ರೀಗಂಧ, ಅಷ್ಟಗಂಧಗಳಿಂದ ಅಭಿಷೇಕ, ಪುಷ್ಪವೃಷ್ಟಿ ಹಾಗೂ ಮಹಾಶಾಂತಿಧಾರ ನೆರವೇರಿಸಲಾಯಿತು. ನಂತರ ನಿರ್ವಾಣ ಲಡ್ಡುವನ್ನು ಅರ್ಪಿಸಲಾಯಿತು. ನೆರೆದಿದ್ದ ಭಕ್ತರು ಜಯಕಾರ ಹಾಕಿ ತಮ್ಮ ಭಕ್ತಿ ಸಮರ್ಪಿಸಿದರು.


ವರ್ಣಮುದ್ರಿತ ಗೊಮ್ಮಟವಾಣಿ ಪತ್ರಿಕೆ
ನಿಮ್ಮ ಮನೆಗೆ ತಲುಪುತ್ತಿಲ್ಲವೇ....?
ಸಂಪರ್ಕಿಸಿ : 8660118443

ವಾರ್ಷಿಕ ಚಂದಾ : ರೂ. 200-00
ಆಜೀವ ಸದಸ್ಯತ್ವ : ರೂ. 2,000-00



ಬೇಕಾಗಿದ್ದಾರೆ

1) ಅಕೌಂಟೆಂಟ್ (ಅನುಭವವುಳ್ಳವರಿಗೆ ಮೊದಲ ಆಧ್ಯತೆ)
2) ಅಡಿಗೆಯವರು (ದಂಪತಿಗಳಿಗೆ ಮೊದಲ ಆಧ್ಯತೆ)
3) ಕಛೇರಿಗೆ (ಪಿಯುಸಿ, ಬಿ.ಎ., ಬಿ.ಕಾಂ. ಆದಂತಹ ಯುವಕರು)



ಶ್ರೀಕ್ಷೇತ್ರಕ್ಕೆ ಆಹಾರ, ಔಷದ, ವಿದ್ಯಾದಾನಕ್ಕೆ ಈ ಕೆಳಕಂಡ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ದಾನ ನೀಡಬಹುದು


Paytm G Pay PhonePe


### ಜಿನಭಾಷಿತ

ಕೋಹೋ ಪೀಇಂ ಪಣಾಸೇಇ ಮಾಣೋ
ವಿಣಯ ಣಾಸಣೋ ।
ಮಾಯಾ ಮಿತ್ತಾಣಿ ಣಾಸೇಇ ಲೋಹೋ
ಸವ್ವ ವಿಣಾಸಣೋ ॥ಸಮಣಸುತ್ತಂ,ರಯಣತ್ತಯಸುತ್ತಂ-8

ಕ್ರೋಧವು ಪ್ರೀತಿಯನ್ನು, ಮಾನವು ವಿನಯವನ್ನು, ಮಾಯೆಯು ಮೈತ್ರಿಯನ್ನು ಮತ್ತು ಲೋಭವು ಸರ್ವವನ್ನು ನಾಶ ಮಾಡುತ್ತದೆ.

## ಶ್ರೀ ಕ್ಷೇತ್ರ ಶ್ರವಣಬೆಳಗೊಳದಲ್ಲಿ ಚಾತುರ್ಮಾಸ ನಿರತ ಸಾಧುವೃಂದ





ಪ.ಪೂ. ಮುನಿಶ್ರೀ 108 ಪಾವನಕೀರ್ತಿ ಮಹಾರಾಜರು,
ಪ.ಪೂ. ಮುನಿಶ್ರೀ 108 ಅಮೋಘಕೀರ್ತಿ ಮಹಾರಾಜರು,
ಪ.ಪೂ. ಮುನಿಶ್ರೀ 108 ಅಮರಕೀರ್ತಿ ಮಹಾರಾಜರು,
ಪ.ಪೂ. ಮುನಿಶ್ರೀ 108 ಆದಿಸಾಗರ ಮಹಾರಾಜರು,
ಪ.ಪೂ. ಮುನಿಶ್ರೀ 108 ನಿರ್ದೋಷಸಾಗರ ಮಹಾರಾಜರು
ಪೂಜ್ಯ ಗಣಿನೀ ಆರ್ಯಿಕಾ ಶ್ರೀ 105 ವಿಶಿಷ್ಟಮತಿ ಮಾತಾಜಿ,
ಪೂಜ್ಯ ಗಣಿನೀ ಆರ್ಯಿಕಾ ಶ್ರೀ 105 ಕೀರ್ತಿಮತಿ ಮಾತಾಜಿ,
ಪೂಜ್ಯ ಆರ್ಯಿಕಾ ಶ್ರೀ 105 ಶಿವಮತಿ ಮಾತಾಜಿ,
ಪೂಜ್ಯ ಆರ್ಯಿಕಾ ಶ್ರೀ 105 ನಿರ್ಮಲಮತಿ ಮಾತಾಜಿ,
ಪೂಜ್ಯ ಆರ್ಯಿಕಾ ಶ್ರೀ 105 ವಿಭೂಷಣಮತಿ ಮಾತಾಜಿ,
ಪೂಜ್ಯ ಆರ್ಯಿಕಾ ಶ್ರೀ 105 ವಿಧಿತಮತಿ ಮಾತಾಜಿ,
ಪೂಜ್ಯ ಆರ್ಯಿಕಾ ಶ್ರೀ 105 ಪ್ರಸನ್ನಮತಿ ಮಾತಾಜಿ,
ಪೂಜ್ಯ ಕ್ಷುಲ್ಲಿಕಾ ಶ್ರೀ 105 ವಿದೂಷಿಮತಿ ಮಾತಾಜಿ,
ಪೂಜ್ಯ ಕ್ಷುಲ್ಲಿಕಾ ಶ್ರೀ 105 ಅಮರಜ್ಯೋತಿ ಮಾತಾಜಿ

## ನಿವೃತ್ತ ನ್ಯಾಯಮೂರ್ತಿ ಡಾ. ನರೇಂದ್ರಕುಮಾರ್ ಜೈನ್‌ರವರು ಶ್ರೀ ಕ್ಷೇತ್ರ ಶ್ರವಣಬೆಳಗೊಳಕ್ಕೆ ಭೇಟಿ



ಶ್ರವಣಬೆಳಗೊಳ ಆ. 16 : ರಾಷ್ಟ್ರೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಆಯೋಗದ ಅಧ್ಯಕ್ಷರಾದ ನಿವೃತ್ತ ನ್ಯಾಯಮೂರ್ತಿ ಡಾ. ನರೇಂದ್ರ ಕುಮಾರ್ ಜೈನ್‌ರವರು ಶ್ರೀ ಕ್ಷೇತ್ರ ಶ್ರವಣಬೆಳಗೊಳಕ್ಕೆ ಆಗಮಿಸಿ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರ ಆಶೀರ್ವಾದ ಪಡೆದರು. ನಂತರ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಿ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿ ಬಗ್ಗೆ ಚರ್ಚಿಸಿ ಸಲಹೆಗಳನ್ನು ನೀಡಿದರು. ಈ ಸಂದರ್ಭದಲ್ಲಿ ಹಾಸನ ಜಿಲ್ಲಾ ಅಲ್ಪಸಂಖ್ಯಾತ ಅಧಿಕಾರಿ ಪ್ರತಾಪ ಸಿಂಹ, ತಹಸೀಲ್ದಾರ್ ಸಿ.ಜಿ. ಗೀತಾ, ಕ್ಷೇತ್ರ ಶಿಕ್ಷಣಾಧಿಕಾರಿ ರೂಪಾ ಹಾಗೂ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.


ಸುದ್ದಿ ಹಾಗೂ ಜಾಹೀರಾತಿಗಾಗಿ ಸಂಪರ್ಕಿಸಿ : Gommatavani Office Contact No. : 8660118443 Email : gommatavani1980@gmail.com


## ಚಂದ್ರಯಾನ 3 ಬಾಹ್ಯಕಾಶ ನೌಕೆಯ ಬಿಡಿಭಾಗ ಪೂರೈಸಿದ ಬೆಳಗಾವಿಯ ಜೈನ ಕಂಪನಿ.

**ಬೆಳಗಾವಿ :** ಭಾರತದ ಬಹುನಿರಿಕ್ಷಿತ ಚಂದ್ರಯಾನ 3 ಗಗನ ನೌಕೆಯನ್ನು ಇಸ್ರೋ ಸಂಸ್ಥೆಯು ಶ್ರೀಹರಿಕೋಟಾದಿಂದ ಜುಲೈ 14ರಂದು ಯಶಸ್ವಿಯಾಗಿ ಉಡಾವಣೆ ಮಾಡಿದೆ. ಈ ಗಗನ ನೌಕೆಯ ಪ್ರಮುಖ ಬಿಡಿ ಭಾಗಗಳನ್ನು ಇಸ್ರೋ ಸಂಸ್ಥೆಯೊಂದಿಗೆ ಕೈಜೋಡಿಸಿರುವ ಬೆಳಗಾವಿಯ ಸರ್ವೋ ಕಂಟ್ರೋಲ್ ಏರೋ ಸ್ಪೇಸ್ ಇಂಡಿಯಾ ಲಿಮಿಟೆಡ್ ಸಂಸ್ಥೆ ಸಿದ್ಧಪಡಿಸಿ ಪೂರೈಸಿದೆ. ಇಂತಹ ಮಹತ್ತರ ಕಾರ್ಯವನ್ನು ನಿರ್ವಹಿಸಿರುವವರು ಬೆಳಗಾವಿಯ ಶ್ರೀ ದೀಪಕ್ ದಡೋತಿ ಹಾಗೂ ಕಂಪನಿಯ ಮಾಲೀಕರು ವ್ಯವಸ್ಥಾಪಕ ನಿರ್ದೇಶಕರಾದ ದೀಪಕ್ ದಡೋತಿಯವರು 15 ವರ್ಷದಿಂದ ಇಸ್ರೋ ಸಂಸ್ಥೆಗೆ ಚಂದ್ರಯಾನ 2, ಮಂಗಳಯಾನಕ್ಕೆ ಬಿಡಿಭಾಗಗಳನ್ನು ಪೂರೈಸಿದ್ದರು.

## 63 ಉಪವಾಸ ಸಾಧನ

**ಕಣಗಾಲ :** ನಿಶ್ಚಯ ಗಿರಿಯಲ್ಲಿ ಚಾತುರ್ವಾಸ ಆಚರಿಸುತ್ತಿರುವ ಆಚಾರ್ಯ ಶ್ರೀ ನಿಶ್ಚಯ ಸಾಗರ ಮಹಾರಾಜರು 63 ಉಪವಾಸಗಳ ಸಾಧನ ನಿರತರಾಗಿರುತ್ತಾರೆ. ಜುಲೈ 14ರಿಂದ ಆರಂಭವಾಗಿರುವ ಸಾಧನೆಯು ಸೆಪ್ಟೆಂಬರ್ 15ರವರೆಗೆ ನಡೆಯಲಿದೆ.

## ಸರ್ಕಾರಿ ಅಭಿಯೋಜಕರಾಗಿ ನೇಮಕ



**ಧಾರವಾಡ :** ಕರ್ನಾಟಕ ಉಚ್ಚ ನ್ಯಾಯಲಯದ ಧಾರವಾಡ ಖಂಡ ಪೀಠಕ್ಕೆ **ಮಹಾವೀರ ಬಾಬಗೌಡ ಗುಂಡವಾಡೆ** ಇವರನ್ನು ಹೆಚ್ಚುವರಿ ರಾಜ್ಯ ಸರ್ಕಾರಿ ಅಭಿಯೋಜಕರಾಗಿ ನೇಮಕಗೊಂಡಿದ್ದಾರೆ.

## ಸಮ್ಯಕ್ ಆರ್. ಜೈನ್‌ಗೆ ಪುರಸ್ಕಾರ



**ಶ್ರವಣಬೆಳಗೊಳ :** 2022–23ನೇ ಸಾಲಿನ 10ನೇ ತರಗತಿ ಕನ್ನಡ ವಿಷಯದಲ್ಲಿ 125ಕ್ಕೆ 125 ಅಂಕ ಪಡೆದ ಶ್ರವಣಬೆಳಗೊಳದ ಬಾಹುಬಲಿ ಪ್ರಾಕೃತ ವಿದ್ಯಾಪೀಠದ ಪ್ರಾಕೃತ ಮತ್ತು ಹಿಂದಿ ವಿಭಾಗದ ಅಧ್ಯಕ್ಷರಾದ ಡಾ. ರಾಜೇಂದ್ರ ಪಾಟೀಲ್ ಶಾಸ್ತ್ರಿ ಮತ್ತು ಡಿ. ಜೀವರತ್ನ ದಂಪತಿಗಳ ಸುಪುತ್ರ **ಸಮ್ಯಕ್ ಆರ್. ಜೈನ್**ಗೆ ಕಲಾಕುಂಚ ಸಂಸ್ಥೆಯ ವತಿಯಿಂದ ಕನ್ನಡ ಕೌಸ್ತುಭ ರಾಜ್ಯಮಟ್ಟದ ಪುರಸ್ಕಾರವನ್ನು ದಾವಣಗೆರೆಯಲ್ಲಿ ನೀಡಲಾಯಿತು. ಈ ವಿದ್ಯಾರ್ಥಿಗೆ ಶ್ರೀಕ್ಷೇತ್ರ ಶ್ರವಣಬೆಳಗೊಳ ಜೈನ ಮಠದ ಪೀಠಾಧ್ಯಕ್ಷರಾದ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ಶುಭ ಹಾರೈಸಿ ಆಶೀರ್ವದಿಸಿದ್ದಾರೆ.

## ಪುರಾತತ್ವ ಇಲಾಖೆಯ ಅಧಿಕಾರಿಗಳ ಭೇಟಿ

**ಶ್ರವಣಬೆಳಗೊಳ :** ಭಾರತೀಯ ಪುರಾತತ್ವ ಇಲಾಖೆಯ ಕೆಮಿಕಲ್ ಇಂಜಿನಿಯರಿಂಗ್ ವಿಭಾಗದ ಅಧೀಕ್ಷಕ **ಚಂದ್ರಪಾಂಡೆ** ಹಾಗೂ ಹಾಸನ ಉಪವಿಭಾಗದ ಸಂರಕ್ಷಣಾಧಿಕಾರಿ **ಗೌತಮ್**ರವರು ಹಾಗೂ ಇನ್ನಿತರ ಅಧಿಕಾರಿಗಳು ಶ್ರೀಕ್ಷೇತ್ರಕ್ಕೆ ಭೇಟಿ ನೀಡಿ ಪರಮಪೂಜ್ಯ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರೊಂದಿಗೆ ಚರ್ಚಿಸಿ, ಆಶೀರ್ವಾದ ಪಡೆದರು.

## ವಾರ್ಷಿಕ ಸರ್ವಸದಸ್ಯರ ಸಭೆ

**ಬೆಂಗಳೂರು :** ದಿನಾಂಕ 09–09–2023ನೇ ಶನಿವಾರ ಬೆಳಗ್ಗೆ 10–30ಕ್ಕೆ ಕೆ.ಆರ್. ರಸ್ತೆಯಲ್ಲಿರುವ ಬಿ.ಬಿ.ಯು.ಎಲ್ ಜೈನ್ ವಿದ್ಯಾಲಯದ ಆವರಣದಲ್ಲಿ ಶ್ರೀ ಮಹಾವೀರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ. ನ 37ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಏರ್ಪಡಿಸಲಾಗಿದೆ ಎಂದು ಸೋಸೈಟಿಯ ಉಪಾಧ್ಯಕ್ಷರಾದ ರಾಜಕೀರ್ತಿರವರು ತಿಳಿಸಿರುತ್ತಾರೆ.


## ಪ್ರವಾಸ

**ಕುಲುಮನಾಲಿ, ಸಿಮ್ಲಾ, ಮಣಿಕರಣ, ಕಾಸೋಲ, ರೋತಾಂಗಪಾಸ್, ಬೆಳಗಾವಿ, ಹುಬ್ಬಳ್ಳಿ, ಬೆಂಗಳೂರಿನಿಂದ ಆರಂಭ.**

ವಿಮಾನ/ರೈಲ್ವೆ ಪ್ರವಾಸ.

ಸೀಟು ಒಂದಕ್ಕೆ ರೂ. 36,000–00

**ಪ್ರವಾಸ ದಿನಾಂಕ**

**31–10–2023 ರಿಂದ 09–11–2023ರವರೆಗೆ,**

ಸಂಪರ್ಕಿಸಿ : ಬದ್ರಿನಾಥ ಯಾತ್ರಾ ಸಂಘ

ಬೆಳಗಾವಿ : 9448347054.


## ಶ್ರೀಕ್ಷೇತ್ರಕ್ಕೆ ಅಲ್ಪಸಂಖ್ಯಾತ ಇಲಾಖೆಯ ಕಾರ್ಯದರ್ಶಿ ಮನೋಜ್‌ಕುಮಾರ್ ಜೈನ್‌ರವರ ಭೇಟಿ



**ಶ್ರವಣಬೆಳಗೊಳ ಆ. 12 : ಕರ್ನಾಟಕ ಸರ್ಕಾರದ ಅಲ್ಪಸಂಖ್ಯಾತ ಇಲಾಖೆಯ ಕಾರ್ಯದರ್ಶಿ ಮನೋಜ್‌ಕುಮಾರ್ ಜೈನ್‌ರವರು ಶ್ರೀಕ್ಷೇತ್ರಕ್ಕೆ ಭೇಟಿ ನೀಡಿದ್ದರು. ಅಲ್ಪಸಂಖ್ಯಾತ ಇಲಾಖೆಯಿಂದ ಶ್ರೀಕ್ಷೇತ್ರ ಶ್ರವಣಬೆಳಗೊಳಕ್ಕೆ ಆಗಬೇಕಾದ ಮೂಲಭೂತ ಸೌಕರ್ಯಗಳ ಬಗ್ಗೆ ಶ್ರೀಗಳವರೊಂದಿಗೆ ಸಮಾಲೋಚನೆ ನಡೆಸಿದರು. ನಂತರ ವಿಂಧ್ಯಗಿರಿಯ ಭ. ಬಾಹುಬಲಿ ಸ್ವಾಮಿಯ ದರ್ಶನ ಪಡೆದು ಪಂಚಾಮೃತ ಅಭಿಷೇಕ, ಮಹಾಶಾಂತಿಧಾರಾ ಮಾಡಿ ಪುಣ್ಯಭಾಗಿಗಳಾದರು.**



## ಕರಾಟೆ ಸ್ಪರ್ಧೆಯಲ್ಲಿ ಸಾಧನೆ : ಅಭಿನಂದನೆ

**ಬೆಂಗಳೂರಿನ ನ್ಯೂಹಾಜನ್ ಪಬ್ಲಿಕ್ ಶಾಲೆಯಲ್ಲಿ 8ನೇ ತರಗತಿ ವ್ಯಾಸಂಗ ಮಾಡುತ್ತಿರುವ ಚಿ. ನಿಶ್ಚಿತ್ ಎ. ಜೈನ್ ರಾಜ್ಯ, ಅಂತರರಾಜ್ಯ ಹಾಗೂ ವಿದೇಶಗಳಲ್ಲಿ 2023ನೇ ಸಾಲಿನಲ್ಲಿ ನಡೆದ ಕರಾಟೆ ಸ್ಪರ್ಧೆಗಳಲ್ಲಿ ಪಾಲ್ಗೊಂಡು ಚಿನ್ನ, ಕಂಚಿನ ಪದಕಗಳನ್ನು ಗಳಿಸಿರುವ ಚಿರಂಜೀವಿಗೆ ಭವ್ಯ ಭವಿಷ್ಯವನ್ನು ಹಾರೈಸುತ್ತೇವೆ.**

**ಕರ್ನಾಟಕ ಸ್ಟೇಟ್ ಚಾಂಪಿಯನ್‌ಶಿಪ್‌ನಲ್ಲಿ 1 ಚಿನ್ನದ ಪದಕ, 1 ಕಂಚಿನ ಪದಕ, ಚೆನ್ನೈನಲ್ಲಿ ನಡೆದ ಕರಾಟೆ ಫೆಡರೇಷನ್ ನ್ಯಾಷನಲ್ ಚಾಂಪಿಯನ್‌ಶಿಪ್‌ನಲ್ಲಿ 1 ಚಿನ್ನದ ಪದಕ, 1 ಕಂಚಿನ ಪದಕ, ದಕ್ಷಿಣ ಕೋರಿಯದ ಭೂತಾನ್‌ನಲ್ಲಿ ನಡೆದ 15ನೇ ದಕ್ಷಿಣ ಕೋರಿಯಾ ಓಪನ್ ಇಂಟರ್‌ನ್ಯಾಷನಲ್ ಕರಾಟೆ ಡ್ಯು ಚಾಂಪಿಯನ್‌ಶಿಪ್ 2 ಕಂಚಿನ ಪದಕ ಪಡೆದಿರುತ್ತಾರೆ.**

**ಶುಭಕೋರುವವರು :**

**ತಂದೆ ಪಿ. ಅಜಿತ್ ಜೈನ್, ತಾಯಿ ಹೆಚ್.ಎನ್. ಸುನಯನ ಬೆಂಗಳೂರು, ತಾತ ಹೆಚ್.ಬಿ. ನಾಗರಾಜಯ್ಯ, ಅಜ್ಜಿ ಜಿ.ಎಸ್. ಶೈಲಾ, ಹಾಸನ ಹಾಗೂ ಕೆ.ಎನ್. ಪದ್ಮನಾಭಯ್ಯ ಯಶಸ್ವತ ದೇವಿ ಬೆಂಗಳೂರು, ಹೆಚ್.ಎನ್. ಅನಂತರಾಜು, ಪಿ. ಪ್ರಿಯದರ್ಶಿನಿ, ಹೆಚ್.ಎ, ದೃತಿ.**



## ಚಂದ್ರಯಾನ–3 ಯಶಸ್ವಿಗೆ ಅಭಿನವ ಚಾರುಶ್ರೀಗಳಿಂದ ಅಭಿನಂದನೆ

**ಶ್ರವಣಬೆಳಗೊಳ :** ಇಸ್ರೋ ಸಂಸ್ಥೆಯ ಚಂದ್ರಯಾನ–3ರ ಯಶಸ್ವಿಯು ಪ್ರತಿಯೊಬ್ಬ ಭಾರತೀಯನಿಗೂ ಹೆಮ್ಮೆಯ ಸಂಗತಿಯಾಗಿದೆ ಎಂದು ಶ್ರವಣಬೆಳಗೊಳ ಜೈನಮಠದ ಪೀಠಾಧ್ಯಕ್ಷರಾದ ಪರಮಪೂಜ್ಯ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ತಿಳಿಸಿದರು. ದೇಶದ ವಿಜ್ಞಾನಿಗಳ ನಿರಂತರ ಪ್ರಯತ್ನ ಮತ್ತು ದಶಕಗಳ ಪರಿಶ್ರಮ ಫಲ ನೀಡಿದೆ. ಚಂದ್ರನ ದಕ್ಷಿಣ ಧ್ರುವದಲ್ಲಿ ಚಂದ್ರಯಾನ–3ರ ವಿಕ್ರಮ್ ಲ್ಯಾಂಡರ್ ಯಶಸ್ವಿಯಾಗಿ ಇಳಿಯುವ ಮೂಲಕ ಭಾರತೀಯ ಬಾಹ್ಯಾಕಾಶ ಸಂಶೋಧನ ಸಂಸ್ಥೆಯ ಸಾಧನೆಯನ್ನು ಜಗತ್ತು ಬೆರುಗುಗಣ್ಣಿನಿಂದ ನೋಡುವಂತೆ ಮಾಡಿದೆ, ಈ ಮಹತ್ತರ ಸಾಧನೆಯಲ್ಲಿ ಶ್ರಮಿಸಿದ ಇಸ್ರೋ ಸಂಸ್ಥೆಯ ಎಲ್ಲಾ ವಿಜ್ಞಾನಿಗಳಿಗೆ ಅಭಿನಂದನೆ ಸಲ್ಲಿಸಿದರು.

## ಜೈನ್ ಕ್ವಿಜ್

**: ಪ್ರಶ್ನೆಗಳು :**

1) **ಪಂಚಾಕ್ಷರಿ ಮಂತ್ರ ಯಾವುದು ?**
2) **ಣಮೋಕಾರ ಮಂತ್ರದಲ್ಲಿ ಎಷ್ಟು ಅಕ್ಷರಗಳಿವೆ ?**
3) **ಒಂದು ಅಕ್ಷರದ ಣಮೋಕಾರ ಮಂತ್ರ ಯಾವುದು ?**
4) **ಅರಿಹಂತ ಪರಮೇಷ್ಠಿಗಳಿಗೆ ಇರುವ ಜನ್ಮದ ಅತಿಶಯಗಳೆಷ್ಟು ?**
5) **ಣಮೋಕಾರ ಮಂತ್ರ ಯಾವ ಭಾಷೆಯಲ್ಲಿದೆ ?**

ಈ ಮೇಲಿನ ಪ್ರಶ್ನೆಗಳಿಗೆ ದಿನಾಂಕ 10–09–2023ರ ಒಳಗೆ ದೂರವಾಣಿ ಸಂಖ್ಯೆ : **8660118443** ಗೆ ವಾಟ್ಸಪ್ ಮೂಲಕ ಸರಿ ಉತ್ತರಗಳನ್ನು ತಮ್ಮ ಹೆಸರು, ವಿಳಾಸದೊಂದಿಗೆ ಕಳುಹಿಸಬೇಕು.

ಸರಿ ಉತ್ತರ ಕಳುಹಿಸಿದ ಮೊದಲ 5 ಜನರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

## ಶ್ರೀಕ್ಷೇತ್ರದಲ್ಲಿ ದೀಕ್ಷಾ ಮಹೋತ್ಸವ



ಬ್ರ. ಪದ್ಮಾವತಿ ದೀದಿ



ಬ್ರ. ವಿಮಲಾ ದೀದಿ

**ಶ್ರವಣಬೆಳಗೊಳ :** ಅಂತಿಮ ಶ್ರುತಕೇವಲಿ ಆಚಾರ್ಯಶ್ರೀ ಭದ್ರಬಾಹು ಸ್ವಾಮಿ ಮೊದಲಾದ ಸಾವಿರಾರು ಶ್ರಮಣರ ಚರಣಸ್ಪರ್ಶದಿಂದ ಪುನೀತವಾದ ಈ ಪುಣ್ಯಭೂಮಿಯಲ್ಲಿ ಸಾವಿರಾರು ವರ್ಷಗಳಿಂದ ಶ್ರಮಣ ದೀಕ್ಷೆ ನಡೆಯುತ್ತಾ ಬಂದಿದೆ. **...ಪುಟ.3ಕ್ಕೆ**

## ಉಚಿತ ಆರೋಗ್ಯ ತಪಾಸಣಾ ಶಿಬಿರ


ಶ್ರವಣಬೆಳಗೊಳ ಆ. 06 : ಅಖಿಲ ಕರ್ನಾಟಕ ಜೈನ ಮಹಿಳಾ ಒಕ್ಕೂಟದ ಸಭೆಯು ಆಗಸ್ಟ್ 06ರಂದು ಶ್ರೀ ಕ್ಷೇತ್ರ ಶ್ರವಣಬೆಳಗೊಳದಲ್ಲಿ ಜರುಗಿತು. ಒಕ್ಕೂಟದ ವತಿಯಿಂದ ಆಯೋಜಿಸಲಾಗಿದ್ದ ಉಚಿತ ಆರೋಗ್ಯ ತಪಾಸಣ ಶಿಬಿರವನ್ನು ಪರಮಪೂಜ್ಯ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯುವರು ಉದ್ಘಾಟಿಸಿದರು. ಸುಮಾರು 350 ಫಲಾನುಭವಿಗಳು ಇದರ ಉಪಯೋಗವನ್ನು ಪಡೆದುಕೊಂಡರು. ಅವಶ್ಯಕತೆ ಇದ್ದ 15 ಜನ ರೋಗಿಗಳಿಗೆ ಬೆಂಗಳೂರಿನ ಸಪ್ತಗಿರಿ ಆಸ್ಪತ್ರೆಯಲ್ಲಿ ಉಚಿತವಾಗಿ ಶಸ್ತ್ರಚಿಕಿತ್ಸೆ ಮಾಡಲಾಯಿತು. ಈ ಸಂದರ್ಭದಲ್ಲಿ ಒಕ್ಕೂಟದ ಅಧ್ಯಕ್ಷೆ ಪದ್ಮಿನಿ ಪದ್ಮಾರಾಜ್ ಮಾತನಾಡಿ 2024ಕ್ಕೆ ಒಕ್ಕೂಟದ ಸ್ಥಾಪನೆಯಾಗಿ 25ವರ್ಷಗಳಾಗುತ್ತಿದ್ದು ಕರ್ನಾಟಕದ ಎಲ್ಲಾ ಮಹಿಳಾ ಸಮಾಜಗಳು ಸೇರಿ ರಜತ ಮಹೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲು ತೀರ್ಮಾನಿಸಿದ್ದೇವೆ ಎಂದು ತಿಳಿಸಿದರು.

## ಶ್ರಾವಣ ಶುಕ್ರವಾರದ ಪ್ರಯುಕ್ತ ಶ್ರೀ ಪದ್ಮಾವತಿ ಅಮ್ಮನವರಿಗೆ ವಿಶೇಷ ಪೂಜೆ



ಶ್ರವಣಬೆಳಗೊಳ ಆ. 18 : ಶ್ರೀ ಕ್ಷೇತ್ರ ಶ್ರವಣಬೆಳಗೊಳದ ಭಂಡಾರಬಸದಿಯಲ್ಲಿ ಶ್ರಾವಣ ಶುಕ್ರವಾರದ ಪ್ರಯುಕ್ತ ಶ್ರೀ ಪದ್ಮಾವತಿ ಅಮ್ಮನವರಿಗೆ ಪೂಜಾವಿಧಿವಿಧಾನ ನೆರವೇರಿತು.

## ಶ್ರಾವಣ ಮಂಗಳವಾರದ ಪ್ರಯುಕ್ತ ಶ್ರೀ ಕೂಷ್ಮಾಂಡಿನಿ ಅಮ್ಮನವರಿಗೆ ವಿಶೇಷ ಪೂಜೆ



ಶ್ರವಣಬೆಳಗೊಳ ಆ. 22 : ಶ್ರೀ ಕ್ಷೇತ್ರ ಶ್ರವಣಬೆಳಗೊಳದಲ್ಲಿ ಶ್ರಾವಣ ಮಂಗಳವಾರದ ಪ್ರಯುಕ್ತ ಕ್ಷೇತ್ರದ ಅದಿದೇವತೆ ಶ್ರೀ ಕೂಷ್ಮಾಂಡಿನಿ ಅಮ್ಮನವರಿಗೆ ಪೂಜಾ ವಿಧಿವಿಧಾನ ನೆರವೇರಿಸಲಾಯಿತು. ಈ ಕಾರ್ಯಕ್ರಮದಲ್ಲಿ 350ಕ್ಕೂ ಹೆಚ್ಚು ಶ್ರಾವಕ ಶ್ರಾವಕಿಯರು ಪಾಲ್ಗೊಂಡಿದ್ದರು.

# ಬೆಳಗೊಳ ಬೆಳಗಿದ ಮಹನೀಯರು

ಜಗತ್ತಿನಲ್ಲಿ ಅಧರ್ಮ ತಾಂಡವವಾಡುವಾಗ ಧರ್ಮವನ್ನು ಉಳಿಸಲು ಯಾರಾದರೂ ಹುಟ್ಟಿಕೊಳ್ಳಲೇಬೇಕು ಎಂಬುದು ಕಾಲಕಾಲಕ್ಕೆ ಸತ್ಯವಾಕ್ಯವಾಗಿ ಉಳಿದು ಬಂದಿದೆ. ಹಾಗೆಯೇ ಇದು ಶ್ರವಣಬೆಳಗೊಳದ ಸಂಕಷ್ಟದ ದಿನಗಳಲ್ಲಿ ಬೆಳಗೊಳದ ಸಂರಕ್ಷಣೆಗಾಗಿ ಹೊಣೆ ಹೊತ್ತ ಕೆಲವು ವರ್ಗದ ಮೇಲೆ ಬೆಳಕು ಚೆಲ್ಲುತ್ತದೆ. ಅಂತಹ ವರ್ತಕರು, ಗೌಡರು, ನಾಡಗೌಡರು ತಮ್ಮ ಸಂಪತ್ತು, ವೈಭೋಗ ಹಾಗೂ ರಕ್ಷಣೆ ಧರ್ಮದಿಂದ ಮತ್ತು ನಮ್ಮನ್ನು ಕಾಪಾಡಿದ ಕ್ಷೇತ್ರದಿಂದ ಆಗಿದೆ ಎಂದು ನಂಬಿ ನಾವು ಆಚರಿಸುವ ಧರ್ಮ ಮತ್ತು ಕ್ಷೇತ್ರದ ರಕ್ಷಣೆಗೆ ಬೆಳಕಾಗಿ ನಿಂತರು. ಅಲ್ಲದೇ ಕ್ಷೇತ್ರವನ್ನು ಬೆಳಗಿದರು. ಅನ್ಯಧರ್ಮಿಯರ ಸಂಕೋಲೆಯಿಂದ ಬಿಡಿಸಿದರು. ಆ ನೆನೆಪಿನ ಚಿತ್ರಣಗಳು ಇಂದಿಗೂ ಶ್ರವಣಬೆಳಗೊಳದ ಮೂಲೆ ಮೂಲೆಗಳಲ್ಲಿ ಕಾಣುತ್ತದೆ. ಸಾಕ್ಷ್ಯದ ರಾಶಿಯೇ ಬೆಳಗೊಳದಲ್ಲಿ ಮನೆ ಮಾಡಿದೆ. ಆಧುನಿಕತೆಯ ಅರವಳಿಕೆಯಲ್ಲಿ ಮುಳುಗಿದವರಿಗೆ ಅದು ಕಾಣದು. ಧರ್ಮದ ಜಾಗೃತಿಯ ಅರಿವನ್ನು ಬೆಳೆಸಿಕೊಂಡು ಹುಡುಕ ಹೊರಟವರಿಗೆ ಅವುಗಳು ಎದುರುಗೊಂಡು ಸ್ವಾಗತಿಸಿ ಕಥೆಯನ್ನು ಹೇಳುತ್ತವೆ.

ಬೆಳಗೊಳಕ್ಕೆ ಬಂದು ಯಾವ ವಂಶದ ರಾಜರು ಜಿನಾಲಯ ಕಟ್ಟಿಸಲಿಲ್ಲ, ದತ್ತಿ ನೀಡಲಿಲ್ಲ. ಆದರೆ ಗಂಗ ಹಾಗೂ ಹೊಯ್ಸಳರ ಕಾಲದಲ್ಲಿ ಶ್ರಮಣರ, ಕಂತಿಯರ, ರಾಣಿಯರ, ಅಮಾತ್ಯರ, ದಂಡನಾಯಕರ, ಭಂಡಾರಿಗಳ, ಪಟ್ಟಣಸ್ವಾಮಿಗಳ, ವರ್ತಕರ, ನಾಡಗಾವುಂಡರ, ಶ್ರೀಮಂತ ಜೈನ ಶ್ರಾವಕರಿಂದ ಮಾತ್ರ ಶ್ರವಣಬೆಳಗೊಳ ಬೆಳಗಿದೆ ಮತ್ತು ಬೆಳಕು ಕಂಡಿದೆ.

ಸಮಾಧಿ ಮರಣದ ಅನುಸಂಧಾನಕ್ಕೆ ಪುಣ್ಯ ಭೂಮಿಯಾಗಿದ್ದ ಬೆಳಗೊಳವು ಆನಂತರದಲ್ಲಿ ಗೊಮ್ಮಟನ ವಿಗ್ರಹ ಸ್ಥಾಪನೆಯಿಂದಾಗಿ ಜೈನ ಶ್ರಮಣರಿಗೆ, ಕಂತಿಯರಿಗೆ, ರಾಜರಿಗೆ, ಮಂತ್ರಿಗಳಿಗೆ, ವರ್ತಕರಿಗೆ, ಆಕರ್ಷಕ ತಾಣವಾಗಿತ್ತು. ಸುಮಾರು 6ನೇ ಶತಮಾನದಿಂದ 12ನೇ ಶತಮಾನದವರೆಗೂ ಜೈನ ಧರ್ಮದ ಒಂದು ಪ್ರಮುಖ ನೆಲೆಯಾಗಿತ್ತು. ಆಗ ಶ್ರವಣಬೆಳಗೊಳವನ್ನು ಮತ್ತು ಜೈನಧರ್ಮವನ್ನು ಬೆಳಗಿದ್ದು ಜೈನಧರ್ಮದ ಮೂಲಸಂಘದ ಆಚಾರ್ಯರು. ಕ್ಷೇತ್ರವು ಯಾರ ಒಡೆತಕ್ಕೂ ಸಿಲುಕದಂತೆ ತಡೆದು ಹಲವಾರು ಧಾರ್ಮಿಕ ಸಂಘ ಸಂಸ್ಥೆಗಳನ್ನು ಕಟ್ಟಿ ಮುನ್ನಡೆಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಆದರೆ 12 ನೆಯ ಶತಮಾನದ ನಂತರ ಶ್ರವಣಬೆಳಗೊಳದ ಪರಿಸ್ಥಿತಿ ಬದಲಾಗಿ ಮೂಲಸಂಘದ ಆಚಾರ್ಯರು ಸಮಾಜ ಮತ್ತು ಸಂಸ್ಥೆಗಳ ಮೇಲೆ ಹಿಡಿತ ಕಳೆದುಕೊಂಡಿತು. ಒಂದು ಬಗೆಯಲ್ಲಿ ಮೂಲಸಂಘವು ಬಹಳ ಕಠಿಣ ಪರಿಸ್ಥಿತಿಯಲ್ಲಿ ಧರ್ಮ ಉಳಿಸುವ ಕಾರ್ಯದಲ್ಲಿ ತೊಡಗಬೇಕಾಯಿತು. ಜೀವವಿದ್ದರೂ ಜೀವವಿಲ್ಲದಂತೆ ಜೀವನ ಸಾಗಿಸುವ ಪರಿಸ್ಥಿತಿ ಮೂಲಸಂಘದ ಆಚಾರ್ಯರಿಗೆ ಬಂದೊದಗಿತು. ಆ ಕಾಲದಲ್ಲಿ ಇದ್ದ ಕೆಲವು ಅಧಿಕಾರಿಗಳು ಅದುವರೆಗೂ ಸಂಸ್ಥೆಯ ಲಾಭ ಪಡೆದು, ನಂತರ ಅಧಿಕಾರ ಬಿಟ್ಟು ಹೊರ ನಡೆದರೆ, ಉಳಿದ ಕೆಲವರು ಸಂಸ್ಥೆಗಳನ್ನು ತಮ್ಮ ವೈಯಕ್ತಿಕ ಲಾಭಕ್ಕಾಗಿ ಬಳಸಿಕೊಂಡರು. ವರ್ತಕರಿಂದಲೇ ತುಂಬಿದ್ದ ಬೆಳಗೊಳದಲ್ಲಿ ತಮ್ಮ ವೈಯಕ್ತಿಕ ಲಾಭಕ್ಕಾಗಿ, ವರ್ಚಸ್ಸಿಗಾಗಿ ಬೆಳಗೊಳವನ್ನು ಬಳಸಿಕೊಂಡವರೇ ಹೆಚ್ಚು ಅವರಲ್ಲಿ ಜೈನ ಧರ್ಮವನ್ನು ಬೆಳಗೊಳದಲ್ಲಿ ಕಟ್ಟಿ ಬೆಳಸಿದವರು ಬೆಳಗೊಳಕ್ಕೆ ಬೆಳಕಾಗಿ ನಿಂತವರು ವರ್ತಕ, ಗೌಡ ನಾಡಗೌಡ ಸಮುದಾಯದ ಒಂದು ವರ್ಗ ಮಾತ್ರ.

12ನೇ ಶತಮಾನದಲ್ಲಿ ಶ್ರವಣಬೆಳಗೊಳವನ್ನು ಕಟ್ಟಿ ಬೆಳಸಿದ ವರ್ತಕವರ್ಗದವರಲ್ಲಿ ಹೊಯ್ಸಳಸೆಟ್ಟಿ, ನೇಮಿಸೆಟ್ಟಿಯರು ತಾಯಿ ಸೆಟ್ಟಿಗವ್ವೆಯ ನೇತೃತ್ವದಲ್ಲಿ ಚಿಕ್ಕಬೆಟ್ಟದ ಮೇಲೆ ತೇರಿನ ಬಸದಿ ಕಟ್ಟಿಸಿದರು. ಅಗ ಇದ್ದ ವರ್ತಕ ವರ್ಗದಲ್ಲೇ ಮಹಾದಾನಿಯಾಗಿದ್ದ ಮೊಸಳೆಯ ಬಸುವಿಸೆಟ್ಟಿ ದೊಡ್ಡಬೆಟ್ಟದ ಮೇಲೆ ಗಂಗರಾಜನಿಂದ ನಿರ್ಮಿಸಲಾಗಿದ್ದ ಸುತ್ತಾಲಯದಲ್ಲಿ 24 ತೀರ್ಥಂಕರರ ವಿಗ್ರಹಗಳನ್ನು ಪ್ರತಿಷ್ಠಾಪನೆ ಮಾಡಿದನು. ಅಲ್ಲದೇ ತನ್ನ ಗೆಳೆಯರಾದ ಅಂಶಿಸೆಟ್ಟಿ, ಕಮ್ಮಟದ ರಾಮಿಸೆಟ್ಟಿ, ಬಿದಿಯಮಸೆಟ್ಟಿ, ನೇಮಿಸೆಟ್ಟಿ ರಾಚಮಲ್ಲರಿಗೆ ಪ್ರೇರೇಪಣೆ ನೀಡಿ ಇನ್ನಷ್ಟು ವಿಗ್ರಹಗಳನ್ನು ಸುತ್ತಾಲಯದಲ್ಲಿ ಸ್ಥಾಪಿಸಲು ಅವಕಾಶ ಮಾಡಿದನು. ಇದರಿಂದ ಹಾಸನ ತಾಲ್ಲೂಕಿನ ಈಗಿನ ಮೊಸಳೆಯ ಬಸುವಿಸೆಟ್ಟಿಯ ಈ ನಿದರ್ಶನ ಇಡಿ ಮೊಸಳೆಯ ವರ್ತಕ ಸಮುದಾಯಕ್ಕೆ ಸ್ಫೂರ್ತಿ ನೀಡಿತು. ಅಲ್ಲಿನ ದೊಡ್ಡ ಸಂಖ್ಯೆಯ ವಣಿಕ ಸಮುದಾಯ ಬೆಳ್ಗೊಳಕ್ಕೆ ಬಂದು ಗೊಮ್ಮಟ ಹಾಗೂ ಜಿನಾಲಯಗಳ ನಿರ್ವಹಣೆಗೆ ನಿರಂತರ ಕೊಡುಗೆ ನೀಡಿದರು. ಅಲ್ಲಿನ ಸುಮಾರು 75 ಕ್ಕೂ ಹೆಚ್ಚು ವರ್ತಕರು ನಗದು ರೂಪದಲ್ಲಿ ವಾರ್ಷಿಕ ದಾನ ನೀಡಲು ಪ್ರತಿಜ್ಞೆ ಮಾಡಿ ನಡೆಸಿದರು. ನೂರಾರು ವರ್ತಕರು ಧರ್ಮಕಾರ್ಯಕ್ಕೆ ಪಣ ತೊಟ್ಟರು. ಮೊಸಳೆ, ಅಮ್ಮಳೆ, ನಾಗರನವಿಲೆ ಮತ್ತು ಅಂಗಡಿ ಗ್ರಾಮದ ಸೆಟ್ಟಿ–ಸೆಟ್ಟಿಕವ್ವೆಯರು ಭೂಮಿದಾನ ಮಾಡಿದರು. ಬಾಹುಬಲಿ ಸೆಟ್ಟಿ, ಪಾರಿಸಸೆಟ್ಟಿ ಕಾಂತರಾಜಪುರದಲ್ಲಿ ಎಕ್ಕೋಟಿ ಜಿನಾಲಯ ಸ್ಥಾಪಿಸಿದರು.

14ನೇ ಶತಮಾನದ ಉದ್ದಗಲಕ್ಕೆ ವೈಷ್ಣವರು ಜೈನರಿಗೆ ತಂದಿಟ್ಟ ಬಿಕ್ಕಟಿನ ಸಮಯದಲ್ಲಿ ಕಲ್ಲೇಹ ಗ್ರಾಮದ ಬಸುವಿ ಶೆಟ್ಟಿ ಹೊರತುಪಡಿಸಿ ಈ ಕ್ಷೇತ್ರದ ನೆರವಿಗೆ ಬೇರೆ ಯಾರು ಬರಲಿಲ್ಲ. ಅವನು ವಿಜಯನಗರ ರಾಜರು ಹಾಗೂ ವೈಷ್ಣವರೊಂದಿಗೆ ಸಂಧಾನ ನಡೆಸಿ ಧರ್ಮರಕ್ಷಣೆಗೆ ಮುಂದಾದನು. ಪಾಯಿಸೆಟ್ಟಿ ಗೊಮ್ಮಟ ದೇವರಿಗೆ ಚಂಪಕ ವೃಕ್ಷವನ್ನು ಅರ್ಪಿಸಿ ವ್ರತ ಮರಣದ ಅಗ್ಗಳಿಕೆಯನ್ನು ಮೆರೆದನು.

15ನೇ ಶತಮಾನದಲ್ಲಿ ಚಾರುಕೀರ್ತಿ ಮುನಿಯ ಶಿಷ್ಯನಾದ ಮಾಯಣ್ಣಸೆಟ್ಟಿಯು ಭೂಮಿಯನ್ನು ಕೊಂಡು ಅದನ್ನು ಗೊಮ್ಮಟ ಸೇವೆಗೆ ಬಿಟ್ಟನು. ಉತ್ತರ ಕರ್ನಾಟಕದ ಕೊಪಣದಿಂದ ಬಂದ ವರ್ತಕರು ಗೊಮ್ಮಟ ದೇವರಿಗೆ ಮತ್ತು ಸಂಘಕ್ಕೆ ಅಪಾರ ಗೌರವ ಸಲ್ಲಿಸಿ ನಗದುದಾನ ಮಾಡಿದರು. ರತ್ನತ್ರಯ ನೊಂಪಿ ಮಾಡಿ ಗೌರವ ಸಲ್ಲಿಸಲು ಕರಿಯ ಗೊಮ್ಮಟ ಸೆಟ್ಟಿಯ ನೇತೃತ್ವದಲ್ಲಿ ಬಿಡದಿಯಿಂದ ಬಂದ ವರ್ತಕರು ಇಲ್ಲಿಗೆ ಬಂದು ದಾನ ನೀಡಿದರು.

ಬೆಳ್ಗೊಳದ ಪುಟ್ಟಸ್ವಾಮಿಸೆಟ್ಟಿ ಮಕ್ಕಳಾದ ಚನ್ನಣ್ಣ–ಚಿಕ್ಕಣ್ಣರು ಆದಿನಾಥ ಬಸದಿಯನ್ನು ಕಟ್ಟಿಸಿ ಅದನ್ನು ಚನ್ನಣ್ಣ ಬಸದಿ ಎಂದು ಕರೆದರು. ಸುತ್ತಾಲಯದ ತೋರಣ, ಮಾನಸ್ತಂಭ, ಸ್ತಂಭ ಮಂಟಪ, ದೊಡ್ಡ ಬೆಟ್ಟದ ಮೇಲೆ ಪ್ರಾಕೃತಿಕ ಜಲ ಹೊಂಡ ಹಾಗೂ ಪಟ್ಟಣದಲ್ಲಿ ಕೆರೆಯನ್ನು ತೋಡಿಸಿದರು. ಮುತ್ತುಗೆ ಹೊನ್ನಳ್ಳಿಯ ಗೌಡನೊಬ್ಬ ಮಾಂಗಾಯಿ ಬಸದಿಗೆ ಭೂದತ್ತಿ ನೀಡಿದ. ನಾಗದೇವ ಒಂದು ಜಿನಾಲಯವನ್ನು ಬೆಳ್ಗೊಳ ಪಟ್ಟಣದಲ್ಲಿ ನಿರ್ಮಿಸಿ ನಗರ ಜಿನಾಲಯವೆಂದು ಹೆಸರಿಸಿ ದತ್ತಿ ನೀಡಿದ. ವಿಜಯನಗರ ಕಾಲದ ಪ್ರಸಿದ್ಧ ಜೈನ ಶ್ರೀಮಂತ ಶ್ರಾವಕನಾದ ಇರುಗಪ್ಪ ದಂಡನಾಥ ಗೊಮ್ಮಟ ನಿರಂತರ ಸೇವೆಗಾಗಿ ಬೆಳ್ಗೊಳ ಗ್ರಾಮದ ಸುಂದರ ತೋಪು, ತಾನೇ ತೋಡಿಸಿದ ತಟಾಕ(ಕೆರೆ)ಯನ್ನು ಪಂಡಿತಾರ್ಯನ ಮುಂದೆ ಕ್ರಿ.ಶ. 1422ರಲ್ಲಿ ದಾನ ನೀಡಿದ. ಚಂಗಾಳ್ವನು ಗೊಮ್ಮಟನಿಗೆ ಬಳ್ಳಿವಾಡ ನಿರ್ಮಿಸಿದ. ಬೇಗೂರಿನ ಸೆಟ್ಟಿಯು ಅಖಂಡ ಬಾಗಿಲಿನ ಮುಂದೆ ಜಲಾನಯನ ನಿರ್ಮಿಸಿದ. ಗೇರುಸೊಪ್ಪೆಯ ಚೌಡಿಶೆಟ್ಟಿಯು ತನ್ನ ವ್ಯವಹಾರದ ಒಂದು ಭಾಗವನ್ನು ಪುರೋಹಿತ ವರ್ಗದವರಿಗೆ ಬಿಟ್ಟು ಕೊಟ್ಟ. ತ್ಯಾಗ ಬ್ರಹ್ಮಸ್ತಂಭದ ಬಳಿ ಹೂದೋಟ ನಿರ್ಮಿಸಿದ.

ಹೀಗೆ ಶ್ರಮಣರಿಂದ ಮುನ್ನೆಲೆಗೆ ಬಂದ ಶ್ರವಣಬೆಳಗೊಳವು ಅಂದಿನಿಂದ ಇಂದಿನವರಗೂ ಮೂಲಸಂಘದ ಪರಂಪರೆಯ ಅಚಾರ್ಯರು, ಭಟ್ಟಾರಕರು, ವರ್ಚಸ್ವಿ ವರ್ತಕರು, ರಾಣಿಯರು, ದಂಡ ನಾಯಕರು, ಪಟ್ಟಣಸ್ವಾಮಿಗಳು, ನಾಡಗಾವುಂಡರಿಂದ ಬೆಳಗುತ್ತ ಜಿನಧರ್ಮಕ್ಕೆ ಬೆಳಕಾಗಿ ಜೈನ ಧರ್ಮದ ಪ್ರಸಿದ್ಧ ನೆಲೆಯಾಗಿ ಉಳಿದಿದೆ. ಇದರ ಹಿಂದಿನ ಕಾರಣೀಕರ್ತರನ್ನು ನೆನೆಯುತ್ತಲೆ ಇರಬೇಕು. ಮಹನೀಯರನ್ನು ವರ್ಷಕ್ಕೊಮ್ಮೆಯಾದರು ಗೌರವಿಸಬೇಕು. ಅಂತೆಯೇ ಇಂದಿನ ಯುಗಮಾನದಲ್ಲಿ ಸಹ ಬೆಳಗೊಳದ ಬೆಳಕಾಗಿ ನಿಂತು ಐವತ್ತು ವರ್ಷಗಳಲ್ಲಿ ಬೆಳಗೊಳದ ಪರಿಸರವನ್ನು ಬದಲಾಯಿಸಿ ಧಾರ್ಮಿಕ ಕೇಂದ್ರವಾಗಿ ಅಷ್ಟೇ ಅಲ್ಲದೇ ಶೈಕ್ಷಣಿಕ ಕೇಂದ್ರವಾಗಿ, ಸಾಹಿತ್ಯ ಕೇಂದ್ರವಾಗಿ, ಪ್ರಾಚೀನ ಭಾಷೆಯಾದ ಪ್ರಾಕೃತ ಭಾಷೆಯ ಸಂಶೋಧನಾ ಕೇಂದ್ರವಾಗಿ, ಆದುನಿಕ ಸೌಲಭ್ಯಗಳನ್ನು ಗ್ರಾಮೀಣ ಮಟ್ಟದಲ್ಲಿ ಅಳವಡಿಸುವಂತಹ ಕಾರ್ಯವನ್ನು ಎಲ್ಲರ ಸಹಕಾರದೊಂದಿಗೆ ಮಾಡಿ ಧರ್ಮ ಮತ್ತು ಸಮಾಜವನ್ನು ಕಟ್ಟುವ ಸಾಧನೆಯಲ್ಲಿ ಪರಮಪೂಜ್ಯ ಕರ್ಮಯೋಗಿ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ಶ್ರಮಿಸಿ ಸಾಧಿಸಿ ತೋರಿಸಿದ್ದಾರೆ. ತಮ್ಮ ಹಿರಿಯರು ಶ್ರವಣಬೆಳಗೊಳಕ್ಕೆ ಹಾಕಿಕೊಟ್ಟ ಅಭಿವೃದ್ಧಿಯ ಹಾದಿಯನ್ನು ಮುನ್ನಡೆಸಿದ್ದಾರೆ. ಹಾಗಾಗಿಯೇ ಅವರು ಈಗಿನ ಯುಗಮಾನದಲ್ಲಿ "**ಬೆಳ್ಗೊಳದ ಬೆಳಕು**" ಎಂದೆನಿಸಿದ್ದಾರೆ.

– ವೀರೇಂದ್ರ ಬೇಗೂರು

ನೀತಿ ಕಥೆ

## ಹೆಸರೊಳೇನಿದೆ ?

ಒಂದು ಊರಿನಲ್ಲಿ ಒಬ್ಬ ಧರ್ಮಗುರುಗಳಿದ್ದರು. ಅವರು ಪ್ರತಿನಿತ್ಯ ಉತ್ತಮ ಬೋಧನೆಗಳನ್ನು ನೀಡುತ್ತಾ ಎಲ್ಲರಿಗೂ ಸನ್ಮಾರ್ಗವನ್ನು ತೋರುತ್ತಿದ್ದರು. ಇದರಿಂದ ಹಲವಾರು ಮಂದಿ ಪ್ರಯೋಜನ ಪಡೆದು ಉತ್ತಮ ವ್ಯಕ್ತಿಗಳಾಗಿದ್ದರು.

ಆ ಗುರುಗಳಿಗೆ ಒಬ್ಬ ಶಿಷ್ಯನಿದ್ದ ಅವನ ಹೆಸರು 'ದುಷ್ಟ'. ಅವನಿಗೆ ತನ್ನ ಹೆಸರಿನ ಬಗ್ಗೆ ಅತೀವವಾದ ದುಃಖವಾಗಿತ್ತು. ಇದಕ್ಕಾಗಿ ತನಗೆ ಹೆಸರಿಟ್ಟವನನ್ನು ಆಗ್ಗಾಗ್ಗೆ ಮನದಲ್ಲಿ ಬೈದುಕೊಳ್ಳುತ್ತಿದ್ದನು. ಅವನು ಸಮಾಜಮುಖಿಯಾದ ಒಳ್ಳೆಯ ಕಾರ್ಯಗಳನ್ನು ಮಾಡುತ್ತಿದ್ದನು. ಆದರೆ ಇವನು ಎಂದೂ ಕೆಟ್ಟ ಕೆಲಸ ಮಾಡದಿದ್ದರೂ ಉತ್ತಮವಾದ ಕಾರ್ಯಗಳನ್ನು ಮಾಡುತ್ತಿದ್ದರೂ, ಲೋಕದ ದೃಷ್ಟಿಯಲ್ಲಿ 'ದುಷ್ಟ' ಎನಿಸಿಕೊಳ್ಳುತ್ತಿರುವೆನಲ್ಲಾ ಎಂಬ ನೋವು ಕಾಡುತ್ತಿತ್ತು. ತನ್ನ ಗುರುಗಳ ಬಳಿ ತನ್ನ ನೋವನ್ನು ಹೇಳಿಕೊಂಡನು. ಆಗ ಗುರುಗಳು ನಕ್ಕು ನೀನು ಹೊರಗಿನ ಪ್ರಪಂಚವನ್ನು ಒಮ್ಮೆ ಸುತ್ತಿಬಾ, ಯಾರು ಯಾರ ಹೆಸರು ಹೇಗಿದೆ ಎಂಬುದನ್ನು ತಿಳಿದುಕೊಂಡು ಬಾ ಎಂದರು.

ಗುರುವಿನ ಆದೇಶದಂತೆ ಶಿಷ್ಯ ಲೋಕ ಸಂಚಾರಕ್ಕೆ ಹೊರಟನು. ಮಾರ್ಗ ಮದ್ಯದಲ್ಲಿ ಅವನಿಗೆ ಬಿಕ್ಷುಕನೊಬ್ಬ ಎದುರಾದನು. ಅವನು ಬಹಳ ಬಡವನಾಗಿದ್ದನು. ಬಿಕ್ಷೆ ಎತ್ತಿ ಜೀವಿಸಬೇಕಾಗಿತ್ತು. ಅವನನ್ನು ಕುರಿತು ಶಿಷ್ಯನು ನಿನ್ನ ಹೆಸರೇನು ಎಂದು ಕೇಳಿದನು? ಆಶ್ಚರ್ಯ ಎಂದರೆ ಅವನ ಹೆಸರು ಸಂಪತ್‌ರಾಜ್ ಎಂದಿತ್ತು. ಮುಂದೆ ಸಾಗಿದ ಶಿಷ್ಯನಿಗೆ ಮತ್ತೊಬ್ಬನು ಎದುರಾದನು, ಅವನು ಬಹಳ ದುಃಖಿತನಾಗಿದ್ದನು. ಅವನ ದುಃಖ ವಿಚಾರಿಸಲು ನನಗೆ ವ್ಯಾಪಾರದಲ್ಲಿ ನಷ್ಟವಾಯಿತು. ನನ್ನ ಪತ್ನಿ ಕಾಯಿಲೆಯಿಂದ ನರಳುತ್ತಿದ್ದಾಳೆ. ನನ್ನ ಮಗ ಕೆಟ್ಟ ನಡವಳಿಕೆಯಿಂದ ಕಾಲ ಕಳೆದಿದ್ದಾನೆ ಎಂದನು. ಕುತೂಹಲಕ್ಕೆ ಶಿಷ್ಯ ನಿನ್ನ ಹೆಸರೆನೆಂದು ಅವನು ಕೇಳಿದಾಗ ನನ್ನ ಹೆಸರು 'ಆನಂದ' ಎಂದನು.

ಗುರುಗಳ ಶಿಷ್ಯನಾದ ದುಷ್ಟ ಇನ್ನಷ್ಟು ದೂರ ಸಾಗಿದಾಗ ಅಲ್ಲಿ ಒಬ್ಬ ವ್ಯಕ್ತಿಯನ್ನು ಮರವೊಂದಕ್ಕೆ ನೇಣುಹಾಕುತ್ತಿರುವುದು ಕಾಣುತ್ತದೆ. ಅಲ್ಲಿನ ದೃಶ್ಯ ನೋಡಿ ಹೀಗೆ ಶಿಕ್ಷೆ ಒಳಗಾದವನ ಹೆಸರೇನೆಂದು ಕೇಳಲು ಅಲ್ಲಿದ್ದವರು ಅವನು ಹೆಸರು 'ಚಿರಂಜೀವಿ' ಎಂದರು

ಇದರಿಂದ ದೃತಿಗೆಟ್ಟ ಶಿಷ್ಯನು ಗುರುಗಳ ಬಳಿಗೆ ಹಿಂದಿರುಗಿದನು. ಶಿಷ್ಯನನ್ನು ನೋಡಿದ ಗುರುಗಳು ಪ್ರಯಾಣ ಸುಖಕರವಾಗಿತ್ತೇ ದಾರಿಯಲ್ಲಿ ಯಾವ್ಯಾವ ಹೆಸರಿನವರನ್ನು ಕಂಡೆ? ಈಗ ನೀನು ಯಾವ ಹೆಸರನ್ನು ಇಟ್ಟುಕೊಳ್ಳವೆ? ಎಂದರು.

ಅದಕ್ಕೆ ಶಿಷ್ಯನು ಉತ್ತರಿಸಿ ಗುರುಗಳೇ ನಾನೀಗ ಮನಸ್ಸು ಬದಲಾಯಿಸಿರುವೆ. ಕೇವಲ ಹೆಸರನ್ನು ಇಟ್ಟುಕೊಳ್ಳವುದರಿಂದ ಪ್ರಯೋಜನವಿಲ್ಲ. ಕಳ್ಳಿಯ ಹೂವನ್ನು ಮಲ್ಲಿಗೆ ಹೂವು ಎಂದರೆ ಮಲ್ಲಿಗೆಯ ಕಂಪು ಕಡಿಮೆಯಾಗುವುದಿಲ್ಲವೋ ಹಾಗೆಯೇ ನಮ್ಮ ನಡತೆ, ಗೌರವಗಳಿಂದ ವ್ಯಕ್ತಿಯ ವ್ಯಕ್ತಿತ್ವ ನಿರ್ಧಾರವಾಗುತ್ತದೆ ಹೊರತು ಹೆಸರಿನಿಂದಲ್ಲ ಎಂಬ ಅರಿವಾಯಿತು ಎಂದನು.

## ಶ್ರೀಕ್ಷೇತ್ರದಲ್ಲಿ ದೀಕ್ಷಾ ಮಹೋತ್ಸವ

**(ಪುಟ.2 ರಿಂದ)** ಸಂತಸದ ವಿಷಯವೆಂದರೆ ಈ ಪುಣ್ಯಕ್ಷೇತ್ರದಲ್ಲಿ ಚಾತುರ್ಮಾಸ ನಿರತ ಸಮಸ್ತ ಸಾಧುವೃಂದದ ಸಾನ್ನಿಧ್ಯದಲ್ಲಿ ಹಾಗೂ ಪೂಜ್ಯ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ಶ್ರಾವಣ ಶುಕ್ಲ ತ್ರಯೋದಶಿಯ ದಿನಾಂಕ : 29–08–2023ರ ಮಂಗಳವಾರ ದಂದು ಶ್ರೀಕ್ಷೇತ್ರದಲ್ಲಿ 15 ವರ್ಷಗಳಿಂದ ತ್ಯಾಗಿಸೇವೆ ಮಾಡಿಕೊಂಡು ಬಂದಿರುವ **ಬ್ರ. ಪದ್ಮಾವತಿ** ಅವರ ದೀಕ್ಷೆಯು ಪ.ಪೂ. ಆ. ಶ್ರೀ 108 ದೇವನಂದಿ ಮಹಾರಾಜರ ಶಿಷ್ಯರಾದ **ಪ.ಪೂ. 108 ಯುಗಲ ಮುನಿಗಳ** ಕರಕಮಲಗಳಿಂದ ಹಾಗೂ **ಪೂ. ಗಣಿನೀ ಆರ್ಯಿಕಾಶ್ರೀ 105 ವಿಶಿಷ್ಟಮತಿ ಮಾತಾಜಿಯವರ** ಅಮೃತ ಹಸ್ತದಿಂದ **ಬ್ರ. ವಿಮಲಾದೀದಿ** ಯವರ ದೀಕ್ಷೆಯು ನೆರವೇರಲಿದೆ.

### 17ನೇ ವರ್ಷದ ಪುಣ್ಯಸ್ಮರಣೆ



**ಶ್ರೀಮತಿ ನೀಲಾ ಬೋಗಾರ**

ನಿಧನ : 06–09–2006,

ನೀವು ನಮ್ಮನ್ನಗಲಿ 17 ವರ್ಷಗಳಾದವು. ನಿಮ್ಮ ನೆನಪು ನಿತ್ಯ ಅಚ್ಚ ಹಸಿರಾಗಿದೆ. ನೀವು ತೋರಿದ ಆದರ್ಶಗಳು ನಮಗೆ ದಾರಿ ದೀಪವಾಗಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಪ್ರಾರ್ಥಿಸುತ್ತೇವೆ.
ಪತಿ : ತಮ್ಮಣ್ಣ ಎಲ್. ಬೋಗಾರ, ನ್ಯಾಯವಾದಿಗಳು ಬೆಂಗಳೂರು, ಪುತ್ರಿ ಶ್ರೀಮತಿ ಎಸ್.ಪೂಜಾ, ಮೊಮ್ಮಗ ಚಿ: ಎಸ್. ಸಮ್ಮೇದ್ ಹಾಗೂ ಬಂಧುಬಳಗ

### ಭಾವಪೂರ್ಣ ಶ್ರದ್ಧಾಂಜಲಿ



**ಶ್ರೀಮತಿ ಶಾಂತ ಗೋಟುರಿ**

ಜನನ 01–01–1966 ನಿಧನ : 25–07–2023

ಅಗಲಿದ ಆತ್ಮನಿಗೆ ಚಿರಶಾಂತಿಯನ್ನು ಪ್ರಾರ್ಥಿಸುವ
ದುಃಖ ಭಾಗಿಗಳು :
ಪತಿ ಧರಣೇಂದ್ರ ಬಾಬು ಗೋಟುರಿ,
ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗ.

### ಧರ್ಮವಾರ್ತೆ



**ಶ್ರೀ ಯುವರಾಜ ಬಲ್ಲಾಳ್**

ಜನನ 26–06–1932 ನಿಧನ : 23–07–2023

ಯುವರಾಜ ಬಲ್ಲಾಳರ ಆತ್ಮಶಾಂತಿಗಾಗಿ ಅವರ ಕುಟುಂಬದವರು 08–08–2023ರಂದು ಗುತ್ತಿನಮನೆ, ಇಚ್ಲಂಪಾಡಿಯ ಭ. ಶ್ರೀ ಚಂದ್ರನಾಥ ಬಸದಿಯಲ್ಲಿ 108 ಕಲಶಾಭಿಷೇಕ ನೆರವೇರಿಸಿರುತ್ತಾರೆ.

### ಭಾವಪೂರ್ಣ ಶ್ರದ್ಧಾಂಜಲಿ



**ಶ್ರೀಮತಿ ಸರ್ವಮಂಗಳ**

ಮಾಜಿ ಅಧ್ಯಕ್ಷರು ಕೂಷ್ಮಾಂಡಿನಿ ಮಹಿಳಾ ಸಮಾಜ,
ಮಾಜಿ ಸದಸ್ಯರು, ಶ್ರವಣಬೆಳಗೊಳ ಗ್ರಾಮ ಪಂಚಾಯಿತಿ

ಜನನ 01–01–1939 ನಿಧನ : 03–08–2023

ಆಗಲಿದ ಆತ್ಮನಿಗೆ ಚಿರಶಾಂತಿಯನ್ನು ಪ್ರಾರ್ಥಿಸುವ
ದುಃಖ ಭಾಗಿಗಳು :
ಪತಿ ಪುರೋಹಿತ್ ಎಸ್.ಬಿ. ನೇಮಿರಾಜಯ್ಯ
ಕುಟುಂಬದವರು, ಶ್ರವಣಬೆಳಗೊಳ.

## ಶ್ರುತಕೇವಲಿ ಎಜುಕೇಷನ್ ಟ್ರಸ್ಟ್ (ರಿ)



ಮನಃಶಾಂತಿಗೆ ದೇವಸ್ಥಾನ ಎಷ್ಟು ಮುಖ್ಯವೋ ಜನರ ಆರೋಗ್ಯ ಕಾಪಾಡಲು ಆಸ್ಪತ್ರೆಗಳೂ ಅಷ್ಟೇ ಅವಶ್ಯಕ. ಕ್ಷೇತ್ರದಲ್ಲಿರುವ ನಲವತ್ತು ಜಿನಾಲಯಗಳಿಗೆ ನೀಡುವಷ್ಟೇ ಮಹತ್ವವನ್ನು ಆಸ್ಪತ್ರೆಗೂ ನೀಡಲಾಗುತ್ತಿದೆ. ಭಾರತದ ಗ್ರಾಮೀಣ ಪ್ರದೇಶದ ಜನತೆಗೆ ಸಕಾಲದಲ್ಲಿ ಸೂಕ್ತ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವುದು, ಜನತೆಯ ಯೋಗಕ್ಷೇಮದ ಚಿಂತನೆಯ ಫಲವೇ ಈ ಆಸ್ಪತ್ರೆಯ ನಿರ್ಮಾಣದ ಮುಖ್ಯ ಉದ್ದೇಶವಾಗಿದೆ.

ಶ್ರೀಕ್ಷೇತ್ರ ಶ್ರವಣಬೆಳಗೊಳದಲ್ಲಿ 2006ರಲ್ಲಿ ಶಾಶ್ವತ ಯೋಜನೆಯಾಗಿ ಬಾಹುಬಲಿ ಮಕ್ಕಳ ಆಸ್ಪತ್ರೆಯನ್ನು 2018ರಲ್ಲಿ ಬಾಹುಬಲಿ ಜನರಲ್ ಆಸ್ಪತ್ರೆ ಆರಂಭಿಸಲಾಗಿದ್ದು, ಇದುವರೆಗೆ ಮೂರುವರೆ ಲಕ್ಷಕ್ಕಿಂತ ಹೆಚ್ಚು ರೋಗಿಗಳಿಗೆ ಉಚಿತ ಚಿಕಿತ್ಸೆ ಹಾಗೂ ಉಚಿತ ಔಷಧಿ ನೀಡಲಾಗಿದೆ. ಈ ಸೇವೆ ಇದೇ ರೀತಿ ಮುಂದುವರೆಯಲಿದೆ.

**: ಸೌಲಭ್ಯಗಳು :**

ಉಚಿತ ವೈದ್ಯಕೀಯ ತಪಾಸಣೆ | ಮಕ್ಕಳ ವಿಭಾಗ | ಜನರಲ್ ವಿಭಾಗ । ದಂತ ವಿಭಾಗ | ನೇತ್ರ ವಿಭಾಗ | ಡಿಜಿಟಲ್ ಕ್ಷ-ಕಿರಣ ವಿಭಾಗ | ಪ್ರಯೋಗಾಲಯ | ಉಚಿತ ಔಷಧಿ ವಿತರಣೆ | ಮಕ್ಕಳಿಗೆ ಉಚಿತ ಕ್ಷೀರ ವಿತರಣೆ | ಉಚಿತ ಆರೋಗ್ಯ ಶಿಬಿರ | ಮಕ್ಕಳ ಫೋಟೋಥೆರಪಿ | ಗರ್ಭಿಣಿ & ಮಕ್ಕಳ ಲಸಿಕಾ ಕಾರ್ಯಕ್ರಮ |ಇ.ಸಿ.ಜಿ | ಡೇ-ಕೇರ್ | ಮೆಡಿಕಲ್ ಸ್ಟೋರ್ | ಮಕ್ಕಳ ವಿಹಾರಧಾಮ | ಅಂಬುಲೆನ್ಸ್ ಸೌಲಭ್ಯ.



ಶ್ರೀಕ್ಷೇತ್ರದ ಗುರುಪೀಠವು ಪ್ರಾಚೀನ ಕಾಲದಿಂದಲೂ ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಗೆ ಅವಕಾಶ ನೀಡುತ್ತಾ ಬಂದಿದೆ. ಪರಮಪೂಜ್ಯ ಪ್ರಾತಃಸ್ಮರಣೀಯ ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರ ನೇತೃತ್ವದಲ್ಲಿ ಪ್ರಾರಂಭವಾದ ಶ್ರೀ ಗೋಮಟೇಶ್ವರ ವಿದ್ಯಾಪೀಠ ಬ್ರಹ್ಮಚರ್ಯಾಶ್ರಮದಲ್ಲಿ ಜೈನ ವಿದ್ಯಾರ್ಥಿಗಳಿಗೆ ಹಲವು ವರ್ಷಗಳಿಂದ ಉಚಿತವಾಗಿ ಲೌಕಿಕ ಮತ್ತು ಧಾರ್ಮಿಕ ಶಿಕ್ಷಣದ ಜೊತೆಗೆ ಪ್ರಾಕೃತ, ಸಂಸ್ಕೃತ, ಹಿಂದಿ ಅಲ್ಲದೆ ಜೈನ ಪೂಜಾಪಾಠ ಸಂಸ್ಕಾರವನ್ನು ನೀಡಲಾಗುತ್ತಿದೆ. ಈ ವಿದ್ಯಾಪೀಠದಲ್ಲಿ ಸಾವಿರಾರು ವಿದ್ಯಾರ್ಥಿಗಳು ಶಿಕ್ಷಿತರಾಗಿ ಹೊರಹೊಮ್ಮಿದ್ದಾರೆ. ಅವರಲ್ಲಿ ಕೆಲವರು ಪೂಜ್ಯ ಸ್ವಸ್ತಿಶ್ರೀ ಭಟ್ಟಾರಕರು, ಶಾಸ್ತ್ರಿಗಳು, ವಿದ್ವಾಂಸರುಗಳು, ನ್ಯಾಯವಾದಿಗಳು, ಉದ್ಯಮಿಗಳು, ಸರಕಾರಿ/ಖಾಸಗಿ ನೌಕರರಾಗಿ ಉತ್ತಮ ಶ್ರಾವಕ ಜೀವನ ನಡೆಸುತ್ತಿದ್ದಾರೆ. ಶ್ರೀ ಕ್ಷೇತ್ರದಲ್ಲಿಯೇ ಹಲವು ವಿದ್ಯಾರ್ಥಿಗಳು ಉತ್ತಮ ಸ್ಥಾನವನ್ನು ಸಹ ಅಲಂಕರಿಸಿದ್ದಾರೆ.

**: ಸೌಲಭ್ಯಗಳು :**

8ನೇ ತರಗತಿಯಿಂದ 10ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ | ಲೌಕಿಕ ಶಿಕ್ಷಣದ ಜೊತೆಗೆ ಧಾರ್ಮಿಕ ಪಾಠ-ಪ್ರವಚನ, ಭಾಷಾ ಶಿಕ್ಷಣ ವ್ಯವಸ್ಥೆ | ಸುಸಜ್ಜಿತ ಕೊಠಡಿಗಳಲ್ಲಿ ಉಚಿತ ವಸತಿ, ಪೌಷ್ಠಿಕ ಆಹಾರ| ಉಚಿತ, ವಸ್ತ್ರ, ಪಠ್ಯ ಪುಸ್ತಕ, ಔಷಧಿ, ದಿನೋಪಯೋಗಿ ವಸ್ತುಗಳ ವ್ಯವಸ್ಥೆ | ಕನ್ನಡ ಮಾಧ್ಯಮ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ | ಎಸ್‌ಎಸ್‌ಎಲ್‌ಸಿ.ಯಲ್ಲಿ ಉತ್ತೀರ್ಣರಾದ ಯೋಗ್ಯ ವಿದ್ಯಾರ್ಥಿಗಳಿಗೆ ಉನ್ನತ ವಿದ್ಯಾಭ್ಯಾಸಕ್ಕಾಗಿ ಸಹಾಯ | ತೀರ್ಥಕ್ಷೇತ್ರ ದರ್ಶನ ಪ್ರವಾಸ |

## ಬಾಹುಬಲಿ ಪ್ರಾಕೃತ ವಿದ್ಯಾಪೀಠ (ರಿ)
## ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನ ಸಂಸ್ಥೆ
### ಶ್ರೀಧವಲತೀರ್ಥಂ, ಶ್ರವಣಬೆಳಗೊಳ



ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆ 1993ರಲ್ಲಿ ಪರಮಪೂಜ್ಯ ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ಪ್ರಾರಂಭಗೊಂಡು ಪ್ರಾಚೀನ ಭಾಷೆ ಪ್ರಾಕೃತದ ಪ್ರಸಾರ ಕಾರ್ಯದಲ್ಲಿ ನಿರಂತರ ಶ್ರಮಿಸುತ್ತಿದೆ.

ಅತ್ಯಮೂಲ್ಯ ಹಸ್ತಪ್ರತಿಗಳನ್ನು ಸಂರಕ್ಷಿಸಿದ್ದು, ಅನುವಾದ, ಸಂಪಾದನೆ ಮತ್ತು ಪ್ರಕಟಣಾ ಕಾರ್ಯವು ಪ್ರಗತಿಯಲ್ಲಿದೆ. ವಿಚಾರಗೋಷ್ಠಿ, ಶಿಬಿರಗಳನ್ನು ಆಯೋಜಿಸುತ್ತಾ ಬರುತ್ತದೆ. 40 ಸಂಪುಟಗಳಲ್ಲಿ ಧವಲತ್ರಯ ಗ್ರಂಥಗಳ ಅನುವಾದ ಮತ್ತು ಪ್ರಕಾಶನ ಮಾಡಿ ಕರ್ನಾಟಕದ ಜನತೆಗೆ ತಲುಪಿಸಿದೆ ಜೊತೆಗೆ ಧವಲೇತರ ಗ್ರಂಥಗಳ ಪ್ರಕಟಣೆ ಕಾರ್ಯ ಜಾರಿಯಲ್ಲಿದೆ. ಪ್ರತಿ ವರ್ಷ ಜಾಗತಿಕ ಮಟ್ಟದಲ್ಲಿ ಪ್ರಖ್ಯಾತ ಪ್ರಾಕೃತ ವಿದ್ವಾಂಸರುಗಳನ್ನು ಗುರುತಿಸಿ ಪ್ರಾಕೃತ ಜ್ಞಾನಭಾರತಿ ಅಂತರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

ಅಂಚೆ ಮತ್ತು ತೆರಪಿನ ಶಿಕ್ಷಣ ಮೂಲಕ ಕನ್ನಡ ಮತ್ತು ಹಿಂದಿ ಮಾಧ್ಯಮದಲ್ಲಿ ಭಾರತದಾದ್ಯಂತ ಪ್ರಾಕೃತದ ವಿವಿಧ ಕೋರ್ಸುಗಳನ್ನು ನಡೆಸಲಾಗುತ್ತಿದ್ದು, 2005 ರಿಂದ 2023ರವರೆಗೆ ಒಟ್ಟು 7,734 ವಿದ್ಯಾರ್ಥಿಗಳು ಪ್ರವೇಶ ಪಡೆದು ಪ್ರಾಕೃತ ಭಾಷೆಯನ್ನು ಅಧ್ಯಯನ ಮಾಡಿದ್ದಾರೆ.

**ಪರಮಪೂಜ್ಯ ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು 18-11-1982ರಲ್ಲಿ ಶ್ರೀ ಶ್ರವಣಬೆಳಗೊಳ ದಿಗಂಬರ ಜೈನ ಜ್ಞಾನ ಪ್ರಸಾರಕ ಸಂಘ (ರಿ.)ವನ್ನು ಸ್ಥಾಪಿಸಿದರು. ಪೂಜ್ಯ ಶ್ರೀಗಳವರ ದಿವ್ಯ ಆಶೀರ್ವಾದದಿಂದ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ನಡೆಸಿಕೊಂಡು ಬರಲಾಗುತ್ತಿದೆ. ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ಒಟ್ಟು 2000 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಓದುತ್ತಿದ್ದಾರೆ.**

### ಶ್ರೀ ಅಂಬಿಕಾ ಪೂರ್ವ ಪ್ರಾಥಮಿಕ ಶಾಲೆ, ಶ್ರೀ ಅಂಬಿಕಾ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ, ಶ್ರೀಯಾಲಮ್ಮ ನೇಮಿರಾಜಯ್ಯ ಅನುದಾನಿತ ಪ್ರೌಢಶಾಲೆ



**ಸ್ಥಾಪನೆ:18-11-1982, 01-06-1983, 01-06-1990**

### ಬಾಹುಬಲಿ ಪಾಲಿಟೆಕ್ನಿಕ್ ಕಾಲೇಜು



**ಸ್ಥಾಪನೆ : 01-06-1986**

### ಶ್ರೀಯಾಲಮ್ಮ ನೇಮಿರಾಜಯ್ಯ ಪದವಿ ಪೂರ್ವ ಕಾಲೇಜು



**ಸ್ಥಾಪನೆ : 13-07-1995**

### ಬಾಹುಬಲಿ ಕಾಲೇಜ್ ಆಫ್ ಇಂಜಿನಿಯರಿಂಗ್




**ಸ್ಥಾಪನೆ : 04-08-1997**

### ಶ್ರೀ ಬಾಹುಬಲಿ ಸ್ಕೂಲ್ ಆಫ್ ನರ್ಸಿಂಗ್



**ಸ್ಥಾಪನೆ : 04-08-2001**

### ಶ್ರೀ ಅಂಬಿಕಾ ಆಂಗ್ಲ ಮಾಧ್ಯಮ ಪ್ರೌಢಶಾಲೆ




**ಸ್ಥಾಪನೆ : 01-06-2001**

ಪ್ರವೇಶಾತಿಗಾಗಿ ಸಂಪರ್ಕಿಸಿ : ಶ್ರೀ ಬಾಹುಬಲಿ ಪಾಲಿಟೆಕ್ನಿಕ್-9902440354, ಶ್ರೀ ಬಾಹುಬಲಿ ತಾಂತ್ರಿಕ ಮಹಾವಿದ್ಯಾಲಯ-9844806605 ಶ್ರೀ ಬಾಹುಬಲಿ ಸ್ಕೂಲ್ ಆಫ್ ನರ್ಸಿಂಗ್-9535661291